# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ::ಕೇಂದ್ರ ಕಛೇರಿ :: ಬೆಂಗಳೂರು

## ಜಾಹೀರಾತು ಸಂಖ್ಯೆ 1/2017 ಮತ್ತು 2/2107 ದಿನಾಂಕ 5/12/2017 ಹಾಗೂ ಜಾಹೀರಾತು ಸಂಖ್ಯೆ 1/2018 ಮತ್ತು 2/2108 ದಿನಾಂಕ 23/03/2018 ರನ್ವಯ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಮಾಹಿತಿಗಾಗಿ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಜಾಹೀರಾತು ಸಂಖ್ಯೆ 1/2017 ಮತ್ತು 2/2017 ದಿನಾಂಕ 5/12/2017 ರನ್ವಯ ಸಹಾಯಕ ಸಂಚಾರ ನಿರೀಕ್ಷಕ, ನಿರ್ವಾಹಕ, ಭದ್ರತಾ ರಕ್ಷಕ, ಕುಶಲಕರ್ಮಿ ಮತ್ತು ತಾಂತ್ರಿಕ ಸಹಾಯಕ ಹುದ್ದೆಗೆ ಹಾಗೂ ಜಾಹೀರಾತು ಸಂಖ್ಯೆ 1/2018 ಮತ್ತು 2/2018 ದಿನಾಂಕ 23/3/2018ರನ್ವಯ ಕಿರಿಯ ಸಹಾಯಕ-ಕಂ-ಡೇಟಾ ಎಂಟ್ರಿ ಆಪರೇಟರ್ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಸಂಭವನೀಯ ಪಠ್ಯಕ್ರಮ (Syllabus) ಈ ಕೆಳಗಿನಂತಿದೆ.

1) ಸಹಾಯಕ ಸಂಚಾರ ನಿರೀಕ್ಷಕ, ನಿರ್ವಾಹಕ, ಭದ್ರತಾ ರಕ್ಷಕ ಹಾಗೂ ಕಿರಿಯ ಸಹಾಯಕ-ಕಂ-ಡೇಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಪಿ.ಯು.ಸಿ ವಿದ್ಯಾರ್ಹತೆಗೆ ಸರಿಹೊಂದುವ ಸಾಮಾನ್ಯ ಜ್ಞಾನ (General Knowledge), ತಾರ್ಕಿಕ ಪರೀಕ್ಷೆ (Test of Reasoning), ಸಾಮಾನ್ಯ ಗಣಿತ (General Mathematics), ಪ್ರಥಮ ಚಿಕಿತ್ಸೆ (First Aid). ಸಂವಹನ (Soft Skill) ಅಂದರೆ ಸಾರ್ವಜನಿಕ ಪ್ರಯಾಣಿಕರು/ ಹಿರಿಯ ನಾಗರೀಕರು/ಮಹಿಳೆಯರು/ ಶಾಲಾ ಮಕ್ಕಳು ಮತ್ತು ವಿಕಲಚೇತನರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳುವ ಬಗ್ಗೆ ಪ್ರಶ್ನೆಗಳನ್ನು ನೀಡಲಾಗುವುದು.

2) ಕುಶಲಕರ್ಮಿ ಹುದ್ದೆಗೆ ನಿಗಧಿಪಡಿಸಲಾಗಿರುವ ವಿದ್ಯಾರ್ಹತೆಗೆ ಅನುಗುಣವಾಗಿ ತಾಂತ್ರಿಕ ವಿಷಯಗಳ ಬಗ್ಗೆ ಹಾಗೂ ಸಾಮಾನ್ಯ ಜ್ಞಾನ (General Knowledge), ತಾರ್ಕಿಕ ಪರೀಕ್ಷೆ (Test of Reasoning) ಸಾಮಾನ್ಯ ಗಣಿತ (General Mathematics) ಬಗ್ಗೆ ಪ್ರಶ್ನೆಗಳನ್ನು ನೀಡಲಾಗುವುದು.

3) ತಾಂತ್ರಿಕ ಸಹಾಯಕ ಹುದ್ದೆಗೆ ನಿಗಧಿಪಡಿಸಲಾಗಿರುವ ವಿದ್ಯಾರ್ಹತೆಗೆ ಅನುಗುಣವಾಗಿ ತಾಂತ್ರಿಕ ವಿಷಯಗಳ ಬಗ್ಗೆ ಹಾಗೂ ಸಾಮಾನ್ಯ ಜ್ಞಾನ (General Knowledge), ತಾರ್ಕಿಕ ಪರೀಕ್ಷೆ (Test of Reasoning) ಸಾಮಾನ್ಯ ಗಣಿತ (General Mathematics) ಬಗ್ಗೆ ಪ್ರಶ್ನೆಗಳನ್ನು ನೀಡಲಾಗುವುದು.

ಮೇಲ್ಕಾಣಿಸಿದ ಮಾದರಿ ಪಠ್ಯಕ್ರಮವನ್ನು (Syllabus) ಅಭ್ಯರ್ಥಿಗಳಿಗೆ ಮಾರ್ಗ ಸೂಚಕವಾಗಿ ಮಾತ್ರ ಪ್ರಕಟಿಸಲಾಗಿದೆ. ಇದರ ಹೊರತಾಗಿಯೂ ಅಭ್ಯರ್ಥಿಗಳು ಸಿದ್ಧತೆಯನ್ನು ಮಾಡಿಕೊಳ್ಳಲು ತಿಳಿಯಪಡಿಸಲಾಗಿದೆ.

***ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ಕುಶಲಕರ್ಮಿ ಹುದ್ದೆಗೆ ದಿನಾಂಕ 26/5/2018 ರಂದು ಹಾಗೂ ಸಹಾಯಕ ಸಂಚಾರ ನಿರೀಕ್ಷಕ, ನಿರ್ವಾಹಕ, ಭದ್ರತಾ ರಕ್ಷಕ, ಕಿರಿಯ ಸಹಾಯಕ-ಕಂ-ಡೇಟಾ ಎಂಟ್ರಿ ಆಪರೇಟರ್ ಹಾಗೂ ತಾಂತ್ರಿಕ ಸಹಾಯಕ ಹುದ್ದೆಗಳಿಗೆ ದಿನಾಂಕ 27/5/2018 ರಂದು ನಡೆಸಲಾಗುತ್ತದೆ.***

ಅಭ್ಯರ್ಥಿಗಳು ಆಗಿಂದಾಗ್ಗೆ ಸಂಸ್ಥೆಯ ವೆಬ್‌ಸೈಟ್ www.mybmtc.com ನೋಡುವುದು.

www.kpscvaani.com